ಶ್ರೀ ಹೆಚ್. ಶಿವಪ್ಪ : ಇಂಥ ಸಂದರ್ಭದಲ್ಲಿ ಭೂ ಸ್ವಾಧೀನ ನಡವಳಿಕೆಗಳು ಬಹಳ ನಿಧಾನವಾಗುವುದರಿಂದ ಸೆಕ್ಷನ್ 17 ಇನ್‌ವೋಕ್ ಮಾಡಿ ಜನರಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆಯನ್ನು ಮಾಡುತ್ತಾರಾ? ಏಕೆಂದರೆ ಎಮರ್‌ಜೆನ್ಸಿ ಕ್ಲಾಸ್ ಮಾಡಿದರೆ ಬೇಗ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಸ್ವಾಧೀನ ತೆಗೆದುಕೊಂಡು ಬೇಗ ಕೆಲಸವನ್ನು ಪ್ರಾರಂಭ ಮಾಡಬಹುದು.

MR. SPEAKER : Probably the intention of the Hon. Member behind asking this supplementary is that there has been inordinate delay in supplying the drinking water and the Government should hasten the process of land acquisition.

SRI H. SHIVAPPA : Sir, there is special emergency clause under Section 17 of the Land Acquisition Act. Why don't the Government invoke this emergency clause?

MR. SPEAKER : That is true. It is a good supplementary. What the Hon. Member desires is, in the interest of the public, you should invoke the emergency clause and expediate the process of land acquisition. I think, there should not be any difficulty for the Government. Please say, Yes. Wherever the public interest is involved, you invoke that clause. I am thankful to Mr. Shivappa for making that good suggestion through supplementary question.

ಶ್ರೀ ವೈಜನಾಥ್ ಪಾಟೀಲ್ : ಆಗಲೀ, ವಿಚಾರ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ರಾಣಿಬೆನ್ನೂರು ಮತ್ತು ಬ್ಯಾಡಗಿ ಕುಡಿಯುವ ನೀರು ಸರಬರಾಜು

336 - ಶ್ರೀ ವಿ.ಎಸ್. ಖರ್ಜಗಿ (ರಾಣೆಬನ್ನೂರು) : ಮಾನ್ಯ ನಾಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಂಗಭದ್ರ ನದಿಯಿಂದ ರಾಣೆಬೆನ್ನೂರು ಹಾಗೂ ಬ್ಯಾಡಗಿಗೆ ಕುಡಿಯುವ ನೀರು ಪೂರೈಕೆ ಮಾಡುವ ಕಾರ್ಯವು ಮಂದಗತಿಯಿಂದ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇಲ್ಲಿಯವರೆಗೆ ಆದ ವೆಚ್ಚ ಹಾಗೂ ಪ್ರಗತಿ ಎಷ್ಟು?*

ಇ) *ಈ ಯೋಜನೆಯು ಎಷ್ಟು ದಿನಗಳಲ್ಲಿ ಮುಗಿಯಬಹುದು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) 95 ಜುಲೈ ಅಂತ್ಯಕ್ಕೆ ಒಟ್ಟು 142.00 ಲಕ್ಷ ರೂ. ವೆಚ್ಚವಾಗಿದ್ದು ಸುಮಾರು ಶೇಕಡ 20 ರಷ್ಟು ಭೌತಿಕ ಪ್ರಗತಿಯನ್ನು ಸಾಧಿಸಲಾಗಿದೆ.

ಇ) 1997ನೇ ಮಾರ್ಚ್ ಅಂತ್ಯದೊಳಗೆ ಚಾಲೂ ಮಾಡಲು ಉದ್ದೇಶಿಸಲಾಗಿದೆ.

ಶ್ರೀ ವಿ.ಎಸ್. ಖಿರ್ಜಗಿ : ಅಧ್ಯಕ್ಷರೇ, ರಾಣೆಬೆನ್ನೂರು ನಗರದಲ್ಲಿ 1 ಲಕ್ಷ ಜನಸಂಖ್ಯೆಯಿದ್ದು 72 ಕೊಳವೆ ಬಾವಿಗಳಿವೆ. ಇದರಲ್ಲಿ ನೂರಕ್ಕೆ ಇಪ್ಪತ್ತರಷ್ಟು ಈಗಾಗಲೇ ಒಣಗಿದೆ. ಈ ಮುಜೇನೂರರಿಂದ ರಾಣೆಬೆನ್ನೂರಿಗೆ ಮತ್ತು ಮುಂಡರಗಿಗೆ ಹೋಗುವಂಥ ಒಂದು ಶಾಶ್ವತವಾಗಿ ಪಿ.ವಿ.ಸಿ. ಪೈಪನ್ನು ಹಾಕುವಂಥ ಕೆಲಸ ಆಗಬೇಕಾಗಿದೆ. ಈಗಾಗಲೇ ಕಾಲು ಭಾಗ ಕೆಲಸವಾಗಿದೆ. ಅದು ತೀವ್ರಗತಿಯಿಂದ ಆದರೆ ರಾಣೆಬೆನ್ನೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ತಪ್ಪುತ್ತದೆ. ಆದಷ್ಟು ಬೇಗನೆ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಅಧ್ಯಕ್ಷರೇ, ಈಗಾಗಲೇ ಜುಲೈ 95ರ ತನಕ 142 ಲಕ್ಷರೂ.ಗಳನ್ನು ಖರ್ಚು ಮಾಡಲಾಗಿದೆ. ಬಹಳಷ್ಟು ಕೆಲಸ ಸಂಪೂರ್ಣವಾಗಿದೆ. ಇನ್ನು 20 ಕೀ.ಮೀವರೆಗೆ ಪಿ.ವಿ.ಸಿ. ಪೈಪನ್ನು ಹಾಕಬೇಕಾಗಿದೆ. ಆ ಕೆಲಸವಾದ ಕೂಡಲೇ ಸರಿಯಾದ ವ್ಯವಸ್ಥೆಯಾಗುತ್ತದೆ. ಆ ದೃಷ್ಟಿಯಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ವಿ.ಎಸ್. ಖಿರ್ಜಗಿ : ಸನ್ಮಾನ್ಯ ಅಧ್ಯಕ್ಷರೇ, 20 ಕೀ.ಮೀಟರ್ ಆಗುವುದು ಇದೆ, ಕೇವಲ ಈಗ 9 ಕಿ.ಮೀಟರ್ ಆಗಿದೆ. ಆ ಕಂಟ್ರಾಕ್ಟರ್ ಹಾಗೂ ಸಂಬಂಧಪಟ್ಟವರನ್ನು ಕರೆಯಿಸಿ ಆದಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಮೈಸೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರ ವಸತಿಗೃಹದ ಬಗ್ಗೆ

338 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾಲೇಜು ವಿದ್ಯಾರ್ಥಿನಿಯರಿಗೆ ವಸತಿಗೃಹದ ವ್ಯವಸ್ಥೆ ಇದೆಯೇ? ಎಷ್ಟು ಜನ ವಿದ್ಯಾರ್ಥಿನಿಯರಿಗೆ ವಸತಿನಿಲಯದಲ್ಲಿ ವ್ಯವಸ್ಥೆ ಇದೆ?

ಇ) ಮೈಸೂರು ಜಿಲ್ಲಾ ಕೇಂದ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರ ವಸತಿಗೃಹಕ್ಕೆ ಬಹಳ ವರ್ಷಗಳಿಂದ ಒತ್ತಾಯವಿದ್ದರೂ ಕೈಗೊಳ್ಳದಿರಲು ಕಾರಣವೇನು?

ಈ) ಯಾವಾಗ ಈ ವಿದ್ಯಾರ್ಥಿನಿಯರಿಗೆ ಒಂದು ವಸತಿಗೃಹ ಪ್ರಾರಂಭಿಸಲಾಗುವುದು.